



ಲೇಟಾಯ್ತು ಎದ್ದೇಳೋ' ಅಂತೆಲ್ಲಾ ಯಾರೂ ಎಬ್ಬಿಸುತ್ತಿರಲಿಲ್ಲ. ನಮ್ಮ ಪಾಡಿಗೆ ನಾವು ಏಳ್ತಿದ್ವಿ. ಸೊಳ್ಳೆಪರದೆ ಬಿಚ್ಚಿ ಮಡಚಿಟ್ಟು ಚಾಪೆ ಜಮಖಾನ ಸುತ್ತಿ ಅದರ ಜಾಗದಲ್ಲಿಡ್ತಿದ್ವಿ. ಮನೆಯಲ್ಲಿ ಹಾಲು ಕುಡಿಯೋವಷ್ಟು ಶ್ರೀಮಂತಿಕೆ ಇರಲಿಲ್ಲ. ಕಾಲು ಲೀಟರ್ ಹಾಲು ತಂದು ನೀರು ಹಾಕಿದ್ದಾನೆಂದು ಆ ಹಾಲಿನವನಿಗೆ ಬೈಕೊಳ್ಳುತ್ತ ಮನೆಯವರಿಗೆಲ್ಲಾ ಒಂದೇ ಸಲ ಕಾಫಿ ಕಾಯಿಸೋವ್ರು. ಕಾಯ್ಕೊಂಡಿದ್ದು ಕುಡಿದು ಲೋಟ ತೊಳೆದು ಬೋರಲಾಕ್ತಿದ್ವಿ.

ನಂತರ ಚಿಲಕವಿಲ್ಲದ ಲೆಟ್ರಿನ್ ರೂಮಿಗೆ ಪ್ರವೇಶ. ಅದ್ಯಾಕ್ ಅದಕ್ಕೆ ಚಿಲಕ ಕಿತ್ಹೋಗಿರ್ತಿತ್ತು. ಇವರ್‍ಯಾಕೆ ಚಿಲಕ ಹಾಕಿಸುತ್ತಿರಲಿಲ್ಲವೋ ಇವತ್ತಿಗೂ ಗೊತ್ತಿಲ್ಲ. ಅಲ್ಲಿಂದ ಬಚ್ಚಲುಮನೆ. ಗೂಡಲ್ಲಿ ಅರ್ಧ ಕತ್ತರಿಸಿದ ಲೈಫ್ ಬಾಯ್ ಸೋಪು, ತೆಂಗಿನ ನಾರಿನ ಮೈಉಜ್ಜೋ ಚಗರೆ, ಬೆನ್ನುಜ್ಜೋ ಕಲ್ಲು, ಕೋಲ್ಗೇಟ್ ಹಲ್ಲಿನ ಪುಡಿಯ ಚಿಕ್ಕ ಡಬ್ಬ, ಜಾಸ್ತಿ ಪುಡಿ ಬೀಳಬಾರದು ಅಂತ ಅದಕ್ಕೆ ಸಣ್ಣ ರಂಧ್ರ...

ಅದೇನೋ ಗೊತ್ತಿಲ್ಲ, ಆಗೆಲ್ಲ ಏನೇನೋ ಪುಡಿಗಳ ಉಪಯೋಗಿಸ್ತಿದ್ರು. ಬಚ್ಚಲುಮನೆಯಲ್ಲಿ ಹಲ್ಲಿನಪುಡಿ, ಸೀಗೇಕಾಯಿಪುಡಿ, ಸರ್ಫ್ ಪುಡಿ, ಅಡುಗೆಮನೆಯಲ್ಲಿ ಟೀ ಪುಡಿ, ಕಾಫಿ ಪುಡಿ, ಖಾರದ ಪುಡಿ, ದನಿಯಾ ಪುಡಿ, ವರಾಂಡದಲ್ಲಿ ರಂಗೋಲಿ ಪುಡಿ, ಡಿಡಿಟಿ ಪುಡಿ, ಗಾಯಕ್ಕೆ ಹಾಕೋ ಸಿಬ್ಜಲ್ ಮಾತ್ರೆ ಪುಡಿ ಹೀಗೆ... ಈಗೆಲ್ಲಾ ಪೇಸ್ಟ್ ಜಮಾನ.

ಸರೀ ಹಲ್ಲುಜ್ಜಿ ಮುಖ ತೊಳ್ಕೊಂಡು ಬರಬೇಕಷ್ಟೆ. ಸ್ನಾನ ಎಲ್ಲ ವಾರಕ್ಕೊಂದು ಅಥವಾ ಎರಡು ಸಲ ಮಾತ್ರ. ಮುಖ ಒರೆಸ್ಕೊಂಡು ಹಾಲಿಗೆ ಬಂದ್ರೆ ಕಿವಿಯಲ್ಲಿರೋ ಸೋಪು ನೊರೆ ನೋಡಿ ತೊಳೆದಿರೋ ಮುಖಕ್ಕೆ ಉಗಿಯೋವ್ರು. ಉಗಿದಿದ್ದನ್ನೂ, ಮುಖದ ನೀರನ್ನೂ ಒರೆಸ್ಕೊಂಡು ಕನ್ನಡಿ ಮುಂದೆ ಬಂದ್ರೆ ಅಲ್ಲಿ ಮನೆಯವರಿಗೆಲ್ಲಾ ಎರಡೇ ಬಾಚಣಿಗೆ. ಒಂದು ಮಾಮೂಲಿಯದು ಇನ್ನೊಂದು ಹೇನು ಹಿಡಿದ ತಲೆಗಳಿಗೆ ಅಂತಾನೆ ಇರೋ ವಿಶೇಷ ಬಾಚಣಿಗೆ. ಅದನ್ನ ನಾವು ಉಪಯೋಗಿಸಂಗೇನೇ ಇರಲಿಲ್ಲ! ಮಾಮೂಲಿ ಬಾಚಣಿಗೆಯನ್ನು ಭಾನುವಾರ ಪಿನ್ನಿನ ಮೂಲಕ ಸ್ವಚ್ಛ ಮಾಡಬೇಕಿತ್ತು. ಏನಿಲ್ಲ ಅಂದ್ರೂ ನೂರು ಗ್ರಾಂ ಕೊಳೆ ಇರೋದು.

ಇನ್ನು ನಾವು ಹೋಗ್ತಿದ್ದಿದ್ದು 'ಸರ್ಕಾರಿ ಸ್ಕೂಲು'. ಮರ್ಜಿಗಾಗಲಿ, ಮುತುವರ್ಜಿಗಾಗಲಿ ನಮ್ಮ ಮನೆಯವ್ರು ಒಂದಿನಕ್ಕೂ ಸ್ಕೂಲ್ ಕಡೆ ತಲೆ ಹಾಕಿ ಮಲಗಿದವರಲ್ಲ. ಮೂರನೇ ಕ್ಲಾಸಿಂದ ನಾಲ್ಕನೇ ಕ್ಲಾಸಿಗೆ ಹೋದರೆ ಆಲ್ರೆಡಿ ನಾಲ್ಕನೇ ಕ್ಲಾಸಿನಿಂದ ಐದಕ್ಕೆ ಹೋಗೋ ಗೆಳೆಯನನ್ನು ಪರೀಕ್ಷೆ ಟೈಂನಲ್ಲೇ 'ನಿನ್ನ ಬುಕ್ಸ್ ಕೊಡಬೇಕು' ಅಂತ ಗೋಗರೆದು ಬುಕ್ ಮಾಡ್ಕೊಂಡಿರುತ್ತಿದ್ದೆವು. ಅವುಗಳಲ್ಲಿ ಕೆಲವು ಸಿಲಬಸ್ಸೇ ಚೇಂಜ್ ಆಗಿರ್ತಿದ್ವು.

ಆವಾಗ ಟೆಕ್ಸ್ಟ್ ಬುಕ್ಕುಗಳು ಎಲ್ಲಂದರಲ್ಲಿ ಸಿಗುತ್ತಿರಲಿಲ್ಲ. ಬುಕ್ ಸೊಸೈಟಿಗಳಲ್ಲಿ ಮಾತ್ರ ಸಿಗೋವು. ಅವರಿಗೆ 'ಸಮಾಜ ಬಂತಾ', 'ವಿಜ್ಞಾನ ಬಂತಾ' ಅಂತಾ ತಲೆ ತಿಂತಿದ್ವಿ. ಇನ್ನು 'ಎಕ್ಸೈಸ್ ಬುಕ್ಕುಗಳನ್ನು ಕೊಡ್ಸಿ' ಅಂತ ಮನೆಯಲ್ಲಿ ಅತ್ತೂ ಸುರಿದು ಕೇಳಿದ್ರೆ ಅವರು ಇನ್ನೂರು ಪೇಜಿಂದು ನಾಲ್ಕು ಕೊಡಿಸೋವ್ರು. ಅವರು ಕೊಡಿಸಿರೋ ಆ ಎಕ್ಸೈಸ್ ಬುಕ್ಕುಗಳಲ್ಲೇ ಭಾಗ ಮಾಡ್ತಿದ್ವಿ. ಸಮಾಜಕ್ಕೆ ಎಪ್ಪತ್ತು ಪೇಜು, ಪೌರನೀತಿಗೆ ಮೂವತ್ತು ಪೇಜು ಎಂದು ಮಧ್ಯದ ಪೇಜನ್ನು ಬೋಟಿನಂತೆ ಮಡಚಿ ಇಡುತ್ತಿದ್ವಿ. ಹೋದ ವರುಷ ಬರೆಯದೇ ಮಿಕ್ಕಿದ ಪೇಜುಗಳನ್ನು ಹರಿದು ದೊಡ್ಡ ಸೂಜಿ ದಾರ ತಗೊಂಡು ಒಂದು ರಫ್ ಬುಕ್ಕನ್ನಾಗಿ ರೆಡಿ ಮಾಡ್ಕೋತಿದ್ವಿ. ಹೊಸ ಟೆಕ್ಸ್ಟ್ ಪುಸ್ತಕಗಳಲ್ಲಿನ ಕಥೆಗಳನ್ನು ಸ್ಕೂಲು ಶುರುವಾಗಕ್ಕೆ ಮುಂಚೆಯ ರಜೆಗಳಲ್ಲೇ ಓದಿಬಿಟ್ಟಿರ್ತಿದ್ವಿ. ಪುಸ್ತಕಗಳ ಮಧ್ಯೆ ಅರಳೀಮರದ ಎಲೆಯನ್ನು, ನವಿಲುಗರಿಯನ್ನು, ಚಾಕೊಲೇಟ್ ರ್‍ಯಾಪರ್ ಅನ್ನು ಇಡ್ತಿದ್ವಿ.

ಆಗ ಹಣ್ಣುಗಳೆಂದರೆ ನಮಗೆ ಸೀಬೇಕಾಯಿ, ನೆಲ್ಲಿಕಾಯಿ, ಹುಣಿಸೇಕಾಯಿ, ಮಾವಿನಕಾಯಿ ಮಾತ್ರ. ಯಾಕೆಂದರೆ ನಾವು ಒಂಥರ ಕಾಯಿಗಳೇ ಆಗಿದ್ದೆವು. ಆಟಿಕೆಗಳೆಂದರೆ ಖಾಲಿ ಡಬ್ಬಗಳು, ಓಡಿಸಲು ಸೈಕಲ್ ಟೈಯರ್, ಗೋಲಿ, ಗಿಲ್ಲಿ ದಾಂಡು, ಸೌದೇ ಬ್ಯಾಟು – ರಬ್ಬರ್ ಬಾಲು. ವಾಟರ್ ಸ್ಪೋರ್ಟ್ಸ್ ಅಂದ್ರೆ ಧರ್ಮಸ್ಥಳದ ತೀರ್ಥದ ಬಾಟಲ್‌ನಲ್ಲಿ ಪಿಚಕಾರಿ ಆಟ. ತಿಂಡಿಗಳೆಂದರೆ ಬೋಟಿ, ಬಾಯಿಬಣ್ಣ, ಶುಂಠಿ ಪೆಪ್ಪರ್‌ಮೆಂಟ್, ಪಾಪಿನ್ಸ್.

ನಮ್ಮದೇ ಆದ ಪುಟ್ಟ ಪ್ರಪಂಚದಲ್ಲಿ ವಿಹರಿಸುತ್ತಿದ್ದೆವು. ಸಣ್ಣ ಸಣ್ಣ ಖುಷಿಗಳನ್ನು ಅನುಭವಿಸುತ್ತಿದ್ದೆವು. ಈಗಿನ ಮಕ್ಕಳು ಅಡ್ಜಸ್ಟ್ ಆಗಲ್ಲ ಎಂಬ ಮಾತು ಕೇಳಿದಾಗ ನಮ್ಮ ಈ ಎಲ್ಲಾ ಮೇಲಿನ ಅನುಭವಗಳು ಅಡ್ಜಸ್ಟ್‌ಮೆಂಟ್‌ಗಳು ನೆನಪಾಗುತ್ತವೆ.